ಸಂಗೀತಗಾರನಾಗಿ ರಂಗಸ್ಥಳ ಏರಿಯೇಬಿಟ್ಟ ಇಪ್ಪತ್ತಾರರ ಕುಡಿಮೀಸೆಯ ಚೆಲುವ ಸೀತಾನದಿ ಗಿರಿಧರ.

'ನೋಡು ನಿನ್ನ ಅದೃಷ್ಟ. ಯಕ್ಷಗಾನ ಹಿಮ್ಮೇಳದ ಮೊದಲ ಮೆಟ್ಟಿಲು ಏರಿದ್ದಿ. ಇವತ್ತು ಸಂಗೀತಗಾರನಾಗಿರಬಹುದು, ಬರೀ ಅಲ್ಲೇ ಉಳಿದುಕೊಳ್ತೀಯೋ, ಅಥವಾ ಮುಂದಕ್ಕೆ ಭಾಗವತನಾಗ್ತಿಯೋ ಎನ್ನುವುದು ನಿರ್ಧಾರವಾಗುವುದು ನಿನ್ನ ಸಿದ್ಧಿಯಿಂದ, ಸ್ವರದಿಂದ, ಸ್ವಂತಿಕೆಯಿಂದ ಅಷ್ಟೇ' ಎಂದು ಅಣ್ಣಪ್ಪ ನಾಯ್ಕರು ಹುಡುಗನ ಮುಖವನ್ನೇ ತದೇಕಚಿತ್ತದಿಂದ ನೋಡುತ್ತ ಅವನ ಕೈ ಕುಲುಕಿದರು. ಗಿರಿಧರ ತುಂಬು ಹೃದಯದಿಂದ ಅವರನ್ನು ನಮಸ್ಕರಿಸಿದ. ನಾನು ಒಂದು ನದಿಯಲ್ಲಿ ದೋಣಿ ಮತ್ತು ಅಂಬಿಗನನ್ನು ಬಿಟ್ಟು ಬಿಟ್ಟಿದ್ದೇನೆ, ನಾನೇ ಬಿಟ್ಟ ದೋಣಿ ಎಂದು ಕೊಚ್ಚಿಕೊಳ್ಳುವುದು, ಆ ಹುಡುಗ ನನ್ನಿಂದಲೇ ಬೆಳೆದದ್ದು ಎಂದು ಉಬ್ಬೋದು, ಹೇಳಿಕೊಳ್ಳುದು ನಂಗೆ ಬೇಡ' ಎನ್ನುವ ಪ್ರಜ್ಞೆಯಿಂದ ಆ ಹುಡುಗನನ್ನು ಅವನ ಪಾಡಿಗೇ ಬಿಟ್ಟರು ಅಣ್ಣಪ್ಪ ನಾಯಕ್ರು.

ಬರೀ ಗಿರಿಧರನಾಗಿದ್ದ 26 ವರುಷದ ತರುಣನನ್ನು ಗಿರಿಧರ ಭಾಗವತ ಅಂತ ಮಾಡಿದ ಅಣ್ಣಪ್ಪ ನಾಯ್ಕರು, ಅವನನ್ನು ಯಕ್ಷಗಾನ ಕ್ಷೇತ್ರದಲ್ಲಿ ಒಂದು ಜನ ಅಂತ ಮಾಡಿ ಅವನ ಇಡೀ ಬದುಕಿಗೆ ತಿರುವು ಕೊಟ್ಟರು.

ಚಾಮುಂಡೇಶ್ವರಿ ಮೇಳದಲ್ಲಿ ಗಿರಿಧರ ಬಹುಬೇಗ ತನ್ನ ಅಸ್ತಿತ್ವವನ್ನು ಕಂಡುಕೊಂಡ. ಅವನು ಹಾಡುವುದು ಎರಡು ಮೂರು ಪದವಾದರೂ ಆ ಹಾಡುವಿಕೆಯಲ್ಲಿ ಅದೆಷ್ಟು ಸಾಂಪ್ರದಾಯಿಕತೆ, ಶಿಸ್ತುಬದ್ಧತೆ, ಶಾಸ್ತ್ರಿಯತೆ, ಸಹಜತೆ ಇತ್ತೆಂದರೆ, 'ಭಾರೀ ಚೆಂದ ಹಾಡ್ತಾನೆ ಹುಡುಗ, ಕೇಳ್ಲಿಕ್ಕೆ ಖುಷಿ ಆಗ್ತದೆ' ಎನ್ನುವ ಮಾತು ಸೀತಾನದಿಯಿಂದ-ಹೆಬ್ರಿಯವರೆಗೂ ಅಲ್ಲಲ್ಲಿ ಕೇಳಿಸಿತು. ಬರೀ ಒಂದು ವರ್ಷದಲ್ಲೇ, 'ನೀ ಇನ್ನು ಭಾಗವತಿಕೆ ಮಾಡು' ಎಂದು ದೇವಸ್ಥಾನದವರೇ ಗಿರಿಧರನನ್ನು ಭಾಗವತಿಕೆಯ ಎರಡನೇ ಮೆಟ್ಟಿಲು ಏರಿಸಿದರು. ಲೋಕದ ಪರಿವೆಯೇ ಇಲ್ಲದೇ ಅವರ ಪಾಡಿಗೆ ಸೀತಾನದಿಯಲ್ಲಿ ಬದುಕುತ್ತಿದ್ದ ಅವನ ಅಪ್ಪ, ಅಜ್ಜಿಯ ಜೊತೆಯೇ ಇದ್ದವನು, ಕೊನೆಕೊನೆಗೆ, 'ಆಗಾಗ ಬರುವುದು ಕಷ್ಟವಾಗ್ತದೆ, ಇಲ್ಲೇ ಇರ್ತೇನೆ' ಎಂದು ದೇವಸ್ಥಾನದ ಕೋಣೆಯೊಂದರಲ್ಲಿ ಬಿಡಾರ ಮಾಡಿದ. ಉಳಿದುಕೊಳ್ಳಲು, ಊಟಕ್ಕೆ, ಬದುಕಿನ ಖರ್ಚಿಗೆ ಮೇಳದಿಂದ ಸಿಗುತ್ತಿದ್ದ ಒಂದಷ್ಟು ಸಂಭಾವನೆಯನ್ನು ಮನೆಗೆ ಕಳುಹಿಸಿ ಉಳಿದ ದುಡ್ಡಿನಲ್ಲಿ ಬದುಕನ್ನು ಧಾರಾಳ ಮುನ್ನಡೆಸಿದ. ಒಂದಷ್ಟು ಸಮಯದಲ್ಲೇ ಇವನ ಭಾಗವತಿಕೆಗೆ ಪ್ರಚಾರವೂ ದೊರಕಿ ಬೇರೆ ಬೇರೆ ಮೇಳಗಳಿಂದ ಇವನಿಗೆ ಬೇಡಿಕೆ ಬರಲೂ ಶುರುವಾಯ್ತು. ಚಾಮುಂಡೇಶ್ವರಿ ಮೇಳ ಬಿಟ್ಟು, ಹೆಬ್ರಿ ಅನಂತೇಶ್ವರ ಮಂಡಳಿಯಲ್ಲಿ ಒಂದಷ್ಟು ದುಡಿದ. ಅಲ್ಲೂ ವಿಭಿನ್ನ ಸ್ವರಕ್ಕೆ ಹೆಸರಾದ. ಮತ್ತೆ ಅಲ್ಲಿಂದ ದುರ್ಗಾವರ ದೇವಸ್ಥಾನದ ಮೇಳ ಸೇರಿದ, ಅಲ್ಲಿ ಇವನ ಪದ್ಯ ಕೇಳಲೆಂದೇ ಬರುವವರಿದ್ದರು. ಅವರೆಲ್ಲರ ನೆಚ್ಚಿನ ಭಾಗವತನಾದ.

ಆದರೆ ಎಲ್ಲವೂ ಬದಲಾಗಿದ್ದು ಅವನು ಈ ದುರ್ಗಾಭಗವತೀ ಯಕ್ಷಗಾನ ತಿರುಗಾಟ ಮೇಳಕ್ಕೆ ಸೇರಿದ ಬಳಿಕವೇ. ಕರಾವಳಿಯ ಘಟಾನುಘಟಿ ಮೇಳಗಳೆಲ್ಲಾ ಇವನಿಗೆ, 'ನಮ್ಮಲ್ಲಿಗೆ ಬನ್ನಿ' ಎಂದು ಕಂಬಳಿ ಹಾಸು ಹಾಕಿ ಕರೆದರು. ಆದರೆ ನಿಮಗೆ ಒಂದಷ್ಟು ಜಾಸ್ತಿಯೇ ಸಂಭಾವನೆ ಕೊಡುವ ಎಂದು ಕರಾವಳಿಯ ಶ್ರೀಮಂತ ಮೇಳವಾಗಿದ್ದ ದುರ್ಗಾಭಗವತೀ ಮೇಳದವರು ಬೇಡಿಕೆ ಸಲ್ಲಿಸಿದಾಗ, ಗಿರಿಧರ ಸಹಜವಾಗಿಯೇ ಆ ಕಡೆಗೆ ವಾಲಿದ. ಮುವ್ವತ್ತು ವರುಷ ಇನ್ನೇನು ತುಂಬಿಕೊಳ್ಳುತ್ತಿರುವಾಗಲೇ ಆ ಮೇಳದ ಪ್ರಧಾನ ಭಾವಗತನಾಗಿಬಿಟ್ಟ.

ಇಷ್ಟು ದಿನ ಬರೀ ಆಯಾ ಊರಿನ ದೇವಸ್ಥಾನದಲ್ಲಷ್ಟೇ ಪದ್ಯ ಹೇಳುತ್ತಿದ್ದವನು, ತಿರುಗಾಟ ಮೇಳದ ದೆಸೆಯಿಂದ ಹೆಬ್ರಿ, ಹಾಲಾಡಿ, ಕುಂದಾಪುರ, ಕಾರ್ಕಳ, ಉಡುಪಿ, ಮಂಗಳೂರು, ಭಟ್ಕಳ ಎಲ್ಲಾ ನೋಡುವ ಹಾಗಾಯ್ತು. ಪುಟ್ಟ ಕೊಳದಲ್ಲಿದ್ದ ಬಣ್ಣದ ಮೀನೊಂದು ನದಿಗೆ ಜಿಗಿದು, ಈಜುತ್ತಾ ಈಜುತ್ತಾ ಸಾಗರ ನೋಡುವ ಹಾಗೆ ಗಿರಿಧರ, ಹೊಸ ಹೊಸ ಲೋಕಗಳನ್ನು ನೋಡಿದ. ಪೇಟೆಯ ಬಣ್ಣಮಯ ಜಗತ್ತು ಹೊಸ ತಿಳಿವು, ಹೊಸ ಅರಿವನ್ನು ಮೂಡಿಸಿತ್ತು. ಇವನು ಇನ್ನಷ್ಟು ಬೆಳೆದದ್ದನ್ನು ದೂರದಿಂದಲೇ ನೋಡುತ್ತ ಅಣ್ಣಪ್ಪ ನಾಯಕ್ರು, ತಾನು ಬಿಟ್ಟ ದೋಣಿ ಸಾಗರಕ್ಕೆ ಸೇರಿತು ಎನ್ನುವ ಧನ್ಯತೆಯಿಂದ ಅರಳಿಬಿಟ್ಟರು. ಆದರೂ ಇದು